**ಅಸಲು ದಾವೆ ಸಂಖ್ಯೆ -102/2023**

**ಪಿ.ಡಬ್ಲ್ಯೂ- 3**

**<u>ದಿನಾಂಕ 17-03-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಶ್ರೀ.ಎಮ್.ಜಿ.ಕೆ ವಕೀಲರಿಂದ ಪ್ರತಿವಾದಿ ಪರವಾಗಿ</u>**

1.ನಾನು 2009 ರಿಂದ ದಸ್ತು ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅದಕ್ಕಿಂತ ಮೊದಲು ದಸ್ತು ಬರಹಗಾರರ ಸಹಾಯಕನಾಗಿ ಸದಾಶಿವ ಅಂಬಿ ಅವರ ಬಳಿ ಕೆಲಸ ಮಾಡುತ್ತಿದ್ದೆ. ಆ ರೀತಿ ದಸ್ತು ಬರಹಗಾರರಾಗಿ ಸರಕಾರದಿಂದ ನೋಂದಣಿ ನೀಡಲಾಗುತ್ತದೆ. ನನಗೆ ದಾಖಲಾತಿಗಳ ಬಗ್ಗೆ ಎಲ್ಲ ನಿಯಮಗಳ ಬಗ್ಗೆ ಮಾಹಿತಿ ಇರುತ್ತದೆ. ನೀವು ನಿಮ್ಮ ಬಳಿ ದಸ್ತು ನೊಂದಣೆಗಾಗಿ ಬಂದ ವ್ಯಕ್ತಿಗಳ ವಿವರಗಗಳಿಗೆ ಸಂಬಂಧಿಸಿದಂತೆ ರಜಿಸ್ಟರ ಇಡುತ್ತೀರಿ ಎಂದರೆ ಸರಿ. ಸದರಿ ರಜಿಸ್ಟರನಲ್ಲಿ ಅವರು ನೀಡಿದ ಮಾಹಿತಿ ಮತ್ತು ವಿವರ ನಮೂದಿಸುತ್ತೀರಿ ಎಂದರೆ ಸರಿ.

2.ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸುತ್ತಿದ್ದು ಅದರಲ್ಲಿ ಬರೆದ ವಿಷಯ ಸರಿ ಇದೆಯಾ ಎಂದರೆ ಸರಿ ಇದೆ ಎಂದು ಹೇಳುತ್ತಾರೆ. ಮುತ್ತುರಾಣಿ ಅವರು ಏನ ಕೆಲಸ ಮಾಡುತ್ತೀದ್ದೀರಾ ಎಂದು ನಮೂದಿಸಿಕೊಂಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಮುತ್ತುರಾಣಿ ಅವರು ವ್ಯವಸಾಯ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಇದೆ. ಅದನ್ನು ನನ್ನ ರಜಿಸ್ಟರನಲ್ಲಿ ನಮೂದಿಸಿರುತ್ತೇನೆ. ನಿಪಿ-2 ದಾಖಲಾತಿ ಇದು ಜಮೀನಿನ ಕ್ರಯದ ಕರಾರು ಪತ್ರ. ಸದರಿ ದಾಖಲಾತಿ 2010 ರ ದಾಖಲಾತಿ ಇದ್ದು, ಅದರಲ್ಲಿ ಮುತ್ತುರಾಣಿ ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನಿಪಿ-2 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. 2010 ರಲ್ಲಿ ಕೃಷಿ ಮಾಡದ ವ್ಯಕ್ತಿಗಳು ಕೃಷಿ ಜಮೀನು ಖರೀದಿಸುವ ಪೂರ್ವದಲ್ಲಿ ಎ.ಸಿ ಅವರ ಕಡೆಯಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ವಾದಿ ಆ ರೀತಿ ಅನುಮತಿ ಪಡೆದಿದ್ದಾಳೋ ಇಲ್ಲವೋ ಎಂದು ನಿಪಿ-2 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಕೇವಲ ದಾಖಲಾತಿ ನೋಂದಾಯಿಸುವಾಗ ಆ ರೀತಿ ಮಾಹಿತಿ ಪಡೆಯುತ್ತೇವೆ ಎಂದು ಹೇಳುತ್ತಾರೆ. ನೀವು ನಿಪಿ-2 ದಾಖಲಾತಿ ಬರೆಯುವ ಸಮಯದಲ್ಲಿ ಖರೀದಿದಾರರ ಯಾವುದಾದರೂ ಪಹಣಿ ಪತ್ರಿಕೆ ಪರಿಶೀಲಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ಪರಿಚಯ ನನಗೆ ನಿಪಿ-2 ದಾಖಲಾತಿ ಬರೆಯುವ ಸಮಯದಲ್ಲಿಯೇ ಆಯಿತು.

3.ನಿಪಿ-2 ದಾಖಲಾತಿ ಬರೆದಂತಹ ಬಾಂಡ್ ಪೇಪರ 2010 ರಲ್ಲಿ ಯಾರಾದರೂ ಹೋಗಿ ಹೆಸರು ಹೇಳಿ ಕೇಳಿದರೆ ಆ ಹೆಸರಿನಲ್ಲಿ ಬಾಂಡ್ ಪೇಪರ ನೀಡಲಾಗುತಿತ್ತು ಎಂದರೆ ಸರಿ. ನಿಪಿ-2 ದಾಖಲಾತಿ ಬಾಂಡ್ ಪೇಪರನಲ್ಲಿ ಮೊದಲ ಪಾರ್ಟಿ ಮತ್ತು ದ್ವಿತೀಯ ಪಾರ್ಟಿ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-2 ದಾಖಲಾತಿಯನ್ನು ನಾನು ನನ್ನ ಬಳಿ ಕೆಲಸ ಮಾಡುವವರ ಮೂಲಕ ಬೆರಳಚ್ಚು ಮಾಡಿಸಿರುತ್ತೇನೆ. ಅದನ್ನು ಯಾರು ಬೆರಳಚ್ಚು ಅವರ ಸಹಿ ನಿಪಿ-2 ದಾಖಲಾತಿ ಮೇಲೆ ಇಲ್ಲ. ಯಾರ ಬಳಿ ಸದರಿ ದಾಖಲಾತಿ ಬೆರಳಚ್ಚು ಆಯಿತು ಎಂದು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-2 ಬಾಂಡ್ ಪೇಪರ ಬರೆಯಲು ಮಾಹಿತಿ ಯಾರು ನೀಡಿದರು ಎಂದರೆ ನನ್ನ ಸ್ವಂತ ಅನುಭವದ ಮೇಲೆ ಬರೆದಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಮುಂದುವರೆದು ಪಕ್ಷಗಾರರನ್ನು ಕೇಳಿ ಅನುಭವದ ಆಧಾರದ ಮೇಲೆ ಬರೆದಿರುತ್ತೇನೆ. ಆ ರೀತಿ ಮಾಹಿತಿ ಪಡೆದ ಬಗ್ಗೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ನಿಪಿ-2 ದಾಖಲಾತಿ ಅದರ ಸಾಕ್ಷ್ಯ ಎಂದು ಹೇಳುತ್ತಾರೆ. ಅದನ್ನು ಹೊರತುಪಡಿಸಿ ಮಾಹಿತಿ ನೀಡಿದ ಬಗ್ಗೆ ಬೇರೆ ದಾಖಲಾತಿ ಇಲ್ಲ.

4.ನಿಪಿ-2 ರ 2 ನೇ ಪುಟದ ಮೊದಲನೇ ಕಂಡಿಕೆಯಲ್ಲಿ ಯಾರು ಆಸ್ತಿ ಖರೀದಿಸುತ್ತಾರೆ ಎಂದು ನಿಖರವಾಗಿ ನಮೂದು ಇಲ್ಲ ಎಂದರೆ ಸಾಕ್ಷಿ ದಾಖಲಾತಿ ಪ್ರಾರಂಭದಲ್ಲಿ ಮೊದಲ ಪಾರ್ಟಿ ಮತ್ತು ಎರಡನೇ ಪಾರ್ಟಿ ಅಂತಾ ನಮೂದು ಇರುತ್ತದೆ ಎಂದು ಹೇಳುತ್ತಾರೆ. ನೀವು ಹೇಳಿದವರ ಹೆಸರಿಗೆ ಏಕೆ ನಮೂದಿಸಿದಿರಿ ಎಂದರೆ ಪಕ್ಷಗಾರರು ಹೇಳಿದ್ದರಿಂದ ನಮೂದಿಸಿರುತ್ತೇನೆ. ನಿಪಿ-2 ಇದು ಅನಿಶ್ಚಿತ ಕರಾರು ಎಂದರೆ ಸರಿಯಲ್ಲ. ಕ್ರಯದಸ್ತು ಬರೆಸಿಕೊಳ್ಳುವವರ ಆರ್ಥಿಕ ಪರಿಸ್ಥಿತಿ ವಿಚಾರಣೆ ಮಾಡಿದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ಕುಟುಂಬಕ್ಕೆ ಸಂಬಂಧಿಸಿದಂತೆ ನೀವು ಹಲವಾರು ದಾಖಲಾತಿ ಬರೆದಿದ್ದೀರಾ ಎಂದರೆ ಸರಿ. ನಾನು ಸರ್ವೆ ನಂ.218 ರ 2010 ರ ಉತಾರೆ ನೋಡಿರುತ್ತೇನೆ. ಸದರಿ ಸರ್ವೆ ನಂಬರಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆಯಾ ಎಂದು ನೀವು ವಿಚಾರಣೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಾರ್ಟಿ ನಂ.1 ರವರ ಸಹಿ ಪೋಟೋ ಮೇಲೆ ಇಲ್ಲ. ಪಾರ್ಟಿ ನಂ.2 ರವರ ಸಹಿ ಪೋಟೋ ಮೇಲೆ ಇದೆ ಎಂದರೆ ಸಾಕ್ಷಿಯು ಸಹಿ ಮೂಡಿಲ್ಲ ಎಂದು ಹೇಳುತ್ತಾರೆ. ನಿಪಿ-2 ದಾಖಲಾತಿ ಮೇಲೆ ಇರುವ ಪ್ರತಿವಾದಿಯ ಸಹಿಗೂ ಮತ್ತು ಪ್ರತಿವಾದ ಪತ್ರದ ಮೇಲಿನ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನನ್ನ ಮುಂದೆ ಪ್ರತಿವಾದಿ ಆ ರೀತಿ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಪಿ-2 ದಾಖಲಾತಿ ಮೇಲೆ ಪ್ರತಿವಾದಿ ನಿಮ್ಮ ಮುಂದೆ ಸಹಿ ಮಾಡಿಲ್ಲ ಮತ್ತು ನಿಪಿ-2 ರ ಮೇಲೆ ಇರುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ.

5.ವಾದಿ ಮತ್ತು ಪ್ರತಿವಾದಿಯವರು ಅವರ ಪ್ರಕಾರ ಎಷ್ಟು ದಿನಗಳ ಹಿಂದೆ ವ್ಯವಹಾರ ಮಾಡಿದ್ದರು ಎಂದು ಮತ್ತು ಯಾರು ಯಾರು ಹಿರಿಯರು ಹಾಜರ ಇದ್ದರು ಎಂದು ನಿಮ್ಮ ಸಮಕ್ಷಮ ಹೇಳಿದ್ದಾರೆಯೇ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-2 ದಾಖಲಾತಿಗೆ ಸಂಬಂಧಿಸಿದಂತೆ ವ್ಯವಹಾರ ಮುಧೋಳದಲ್ಲಿ ಇದ್ದ ನನ್ನ ಕಚೇರಿಯಲ್ಲಿ ಆಗಿದೆ. ವಾದಿ ಮತ್ತು ಪ್ರತಿವಾದಿಯವರ ಊರು ಮಹಾಲಿಂಗಪೂರ. ನಿಪಿ-2 ದಾಖಲಾತಿಯಲ್ಲಿ ಸಾಕ್ಷಿದಾರರ ಕ್ರಮ ಸಂಖ್ಯೆ 6 ನಮೂದಿಸಿದ್ದು ಅದರಲ್ಲಿ 2 ಖಾಲಿ ಇವೆ. ನಿಪಿ-2 ದಾಖಲಾತಿಯ ಯಾವುದೇ ಸಾಕ್ಷಿದಾರರು ನಿಮ್ಮ ಸಮಕ್ಷಮ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ದಾಖಲಾತಿಯ ವ್ಯವಹಾರ ನಿಮ್ಮ ಕಚೇರಿಯಲ್ಲಿ ಆಗಿಲ್ಲ ಎಂದರೆ ಸರಿಯಲ್ಲ. 50 ಲಕ್ಷ ರೂಪಾಯಿಯಷ್ಟು ದೊಡ್ಡ ವ್ಯವಹಾರ ನಿಮ್ಮ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. 2010 ರಲ್ಲಿ 5 ಲಕ್ಷ ರೂಪಾಯಿಗಿಂತ ಹೆಚ್ಚಿನ ವ್ಯವಹಾರ ಆದರೆ ಆದಾಯ ತೆರಿಗೆ ವಿಭಾಗದಿಂದ ಕ್ಲಿಯರನ್ಸ ತರಬೇಕಾಗುತಿತ್ತು ಎಂದರೆ ಸರಿ. ಅದರ ಬಗ್ಗೆ ನಿಪಿ-2 ರಲ್ಲಿ ನಮೂದಿಸಿದ್ದೀರಾ

ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಮುಂದುವರೆದು ಕ್ರಯದಸ್ತಿನ ಸಮಯದಲ್ಲಿ ಫಾರಂ ನಂ.60 ಮತ್ತು 61 ಅಳವಡಿಸುತ್ತೇವೆ. ನಿಪಿ-2 ಇದು ಕ್ರಯದ ದಾಖಲಾತಿ ಅಲ್ಲ. ಅದು ಕ್ರಯದ ಕರಾರು ಪತ್ರ.

6.ನಿಪಿ-2 ದಾಖಲಾತಿ ನಾನು ಬರೆದ ನಂತರ ಇಂಪೌಂಡ ಆಗಿರುತ್ತದೆ. ನೀವು ನಿಪಿ-2 ದಾಖಲಾತಿಯ 2 ನೇ ಪುಟದಲ್ಲಿ ಅಷ್ಟೆ ಸ್ಥಳ ಏಕೆ ಬಿಟ್ಟಿದ್ದೀರಿ ಎಂದರೆ ಸಾಕ್ಷಿಯು ಮೊದಲನೇ ಪುಟ ಮತ್ತು 2 ನೇ ಪುಟ ಸರಿ ಸಮನಾಗಿ ಬರಲು ಎಂದು ಆ ರೀತಿ ಮಾಡಿದ್ದೆ ಎಂದು ಹೇಳುತ್ತಾರೆ. ಆ ರೀತಿ ಪೇಜ ಸೆಂಟಿಂಗ ಮಾಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 ದಾಖಲಾತಿ ಬರೆಯುವ ಸಮಯದಲ್ಲಿ ವಾದಿ, ಪ್ರತಿವಾದಿ ಮತ್ತು ಸಾಕ್ಷಿದಾರರು ಮಾತ್ರ ಹಾಜರ ಇದ್ದರು. 50 ಲಕ್ಷ ರೂಪಾಯಿ ನಿಮ್ಮ ಸಮಕ್ಷಮ ನೀಡಿದ್ದಾರೆ ಎಂದು ನಿಪಿ-2 ದಾಖಲಾತಿಯಲ್ಲಿ ಸುಳ್ಳು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ದೊಡ್ಡ ಮೊತ್ತ ನೀಡಿದ್ದರು ಸಹ ನೇರವಾಗಿ ಕ್ರಯದಸ್ತು ಏಕೆ ಮಾಡಲಿಲ್ಲ ಎಂದರೆ ಸಾಕ್ಷಿಯು ಸರಕಾರಿ ಮೋಜನಿ ಮಾಡಿ ಕಲ್ಲು ಹಾಕಿ ನೀಡಿದ ನಂತರವೇ ಕ್ರಯದಸ್ತು ಆಗಬೇಕು ಎಂದು ಹೇಳಿದ್ದರಿಂದ ಸಮಯಾವಕಾಶ ನೀಡಲಾಯಿತು ಎಂದು ಹೇಳುತ್ತಾರೆ. ಸರ್ವೆ ನಂ.218 ಇದು ಪೂರ್ತಿ ಒಂದೇ ಪ್ರದೇಶ ಎಂದರೆ ಸರಿ. ನೀವು ಸಾಮಾನ್ಯವಾಗಿ ಸರಕಾರದ ದರ ನಿಗದಿಯಾದದಷ್ಟನ್ನು ಮಾತ್ರ ದಾಖಲಾತಿಗಳಲ್ಲಿ ನಮೂದಿಸುತ್ತೀರಿ ಎಂದರೆ ಸರಿ. ಅದರ ಬಗ್ಗೆ ನಿಪಿ-2 ರಲ್ಲಿ ನಮೂದು ಇಲ್ಲ ಎಂದರೆ ಸರಿ. ಆ ಸಮಯದಲ್ಲಿ ಬೆಳಗಲಿಯಲ್ಲಿಯ ಜಮೀನುಗಳು ಪ್ರತಿ ಏಕರೆಗೆ ಎಷ್ಟು ಬೆಲೆ ಇತ್ತು ಎಂದರೆ ಎಷ್ಟು ಬೆಲೆ ಇತ್ತೋ ಅಷ್ಟಕ್ಕೆ ದಾಖಲಾತಿ ತಯಾರಿಸಿದ್ದೇನೆ ಎಂದು ಹೇಳುತ್ತಾರೆ. ಆಗ ಜಮೀನಿಗೆ ಅಷ್ಟು ಬೆಲೆ ಇರಲಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಸಮಕ್ಷಮ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ಸುಳ್ಳು ದಾಖಲಾತಿ ವಾದಿಗೆ ಅನುಕೂಲವಾಗುವಂತೆ ಸೃಷ್ಠಿಸಿ ಅದಕ್ಕೆ ಪೂರಕವಾಗಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ